O.S. No- 135/2018

Pw-1

<u>ದಿನಾಂಕಃ07-11-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

**ಮುಂದುವರೆದ ಪಾಟೀ ಸವಾಲುಃ ಶ್ರೀ. ಡಿ ಡಿ ಜೆ 1 , 2 , 4 , 5 ಮತ್ತು 7 ನೇ ಪ್ರತಿವಾದಿ ಪರ ವಕೀಲರಿಂದ-**

ಈಗ ಹಾಲಿ ಮುಂಬೈದಲ್ಲಿ 06 ಪ್ಲಾಟಗಳು ಇರುತ್ತವೆ . ಅವುಗಳು ನನ್ನ ತಂದೆ ಜೀವಿತಾವಧಿಯಲ್ಲಿ ಇತ್ತು ಎಂದರೆ ಸರಿ . ಸದರಿ ಪ್ಲಾಟಗಳಲ್ಲಿ ಪಾಲು ವಾಟ್ನಿ ಆಗಿರುವದಿಲ್ಲ . ಸದರಿ ಪ್ಲಾಟಗಳನ್ನು ಈ ಕೇಸಿನಲ್ಲಿ ಸೇರಿಸಿರುವದಿಲ್ಲ ಎಂದರೆ ಸರಿ . ನಾನು ಸದರಿ ಪ್ಲಾಟಗಳಲ್ಲಿ ಪಾಲು ಕೊಡುತ್ತಾರೆ ಎಂದು ಹೇಳುತ್ತಾ ಬಂದಿದ್ದರಿಂದ ಸದರಿ ಪ್ಲಾಟಗಳನ್ನು ಈ ಕೇಸಿನಲ್ಲಿ ಸೇರಿಸಿರುವದಿಲ್ಲ . ಸದರಿ ಪ್ಲಾಟಗಳಲ್ಲಿ ಪಾಲು ವಾಟ್ನಿಯಾಗಿರುವದಿಲ್ಲ ಎಂದು ಸುಳ್ಳಾಗಿ ಹೇಳುತ್ತಿದ್ದೇನೆಂದರೆ ಸರಿಯಲ್ಲ .

ಸಿ ಟಿ ಎಸ್ ನಂಬರ 4095/ಎ ಮನೆಯನ್ನು ನನ್ನ ತಂದೆ ಇದ್ದ ಕಾಲದಲ್ಲಿ ಮಾರಾಟ ಮಾಡಿರುತ್ತಾರೆ ಅದನ್ನು ಎಷ್ಟು ಹಣಕ್ಕೆ ಮಾರಾಟ ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ . ಸದರಿ ಸಿ ಟಿ ಎಸ್ ನಂಬರ ಮನೆ ನನ್ನ ತಂದೆ ಅಣ್ಣತಮ್ಮಂದಿರು ಬಿಟ್ಟು ಕೊಟ್ಟ ನಂತರ ನನ್ನ ತಂದೆಗೆ ಬಂದಿರುತ್ತದೆ ಎಂದರೆ ಸರಿ . ನನ್ನ ತಂದೆ ನನ್ನ ಮದುವೆ ಮಾಡಲು ಮತ್ತು ಮದುವೆ ಕಾಲದಲ್ಲಿ ನನಗೆ ಸಾಕಷ್ಟು ಹಣ ಮತ್ತು ಬಂಗಾರವನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ . ನನ್ನ ತಂದೆ ಸದರಿ ಮನೆಯನ್ನು ಯಾವ ಸಾಲಿನಲ್ಲಿ ಮಾರಾಟ ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ . ದಿನಾಂಕ 20-02-2001 ರಂದು ಸ್ವರ್ಣಾಥ ವಾಟ್ನಿ ಟಿಪ್ಪಣಿ ಅಂತಾ ನಾನು ಮತ್ತು ನನ್ನ ಸಹೋದರರು ಮತ್ತು ಸಹೋದರರು ಹಾಗೂ ನನ್ನ ತಂದೆ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ . ಸದರಿ ವಾಟ್ನಿ ಪತ್ರದಡಿಯಲ್ಲಿ ಮುಂಬೈದಲ್ಲಿ ಇರುವ ಚಾಳ ನಂಬರ 1 ರೂಮ್ ನಂಬರ 4 ನನಗೆ ಮತ್ತು ನನ್ನ ಅಣ್ಣತಮ್ಮಂದಿರಿಗೆ ಬಂದಿರುತ್ತದೆ ಮತ್ತು ನಾನು ಸದರಿ ವಾಟ್ನಿ ಪತ್ರಕ್ಕೆ ಸಹಿ ಸಹ ಮಾಡಿರುತ್ತೇನೆ ಎಂದರೆ ಸರಿಯಲ್ಲ . ನನಗೆ ಸದರಿ ವಾಟ್ನಿ ಪತ್ರದಲ್ಲಿ ಮುಂಬೈದಲ್ಲಿ ಇರುವ ಪ್ಲಾಟಗಳಲ್ಲಿ ಮತ್ತು ಜಮಖಂಡಿಯಲ್ಲಿರುವ ಮನೆ ಮಾರಾಟ ಮಾಡಿದ ಬಂದ ಹಣದಲ್ಲಿ ಹಿರಿಯರ ಸಮಕ್ಷಮ ಪಾಲು ಬಂದಿದ್ದರು ಸಹ ರವಿ ಇತನ ಹೆಸರಿನಲ್ಲಿರುವ ಸ್ವಂತ ಗಳಿಸಿದ ಆಸ್ತಿಗಳಲ್ಲಿ ಖೊಟ್ಟಿಯಾಗಿ ಪಾಲು ವಾಟ್ನಿಯನ್ನು ಕೇಳಿಕೊಂಡಿರುತ್ತೇನೆ ಎಂದರೆ ಸರಿಯಲ್ಲ .

ತದನಂತರ 7 ನೇ ಪ್ರತಿವಾದಿ ರವಿ ಮತ್ತು 5 ನೇ ನಾಗವ್ವಾ ಇವರು ಇಬ್ಬರು ಸಹ ಮುಂಬೈಗೆ ಹೋಗಿ ಸ್ವಂತ ಗಳಿಕೆಯಿಂದ ಬಂದ ಹಣದಿಂದ ಜಮಖಂಡಿಯ ಸಿ ಟಿ ಎಸ್ ನಂಬರ 5228/29 ನೇದ್ದನ್ನು ಖರೀದಿ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ . ಸದರಿ ಸದರಿ ಸಿ ಟಿ

ಎಸ್ ನಂಬರ 80,000/- ಕ್ಕೆ ಖರೀದಿಗೆ ಪಡೆದುಕೊಂಡಿದ್ದು ಮತ್ತು ಜಮಖಂಡಿಯಲ್ಲಿರುವ ಹಳೆಯ ಮನೆಯನ್ನು 48,000/- ಕ್ಕೆ ಮಾರಾಟ ಮಾಡಿದ್ದರಿಂದ ಯಾವುದೇ ಮನೆ ಮಾರಾಟ ಮಾಡಿ ಬಂದ ಹಣವನ್ನು 5 ಮತ್ತು 7 ನೇ ಪ್ರತಿವಾದಿ ಉಪಯೋಗಿರುವದಿಲ್ಲ ಎಂದರೆ ಸರಿಯಲ್ಲ . ತದನಂತರ 5 ಮತ್ತು 7 ನೇ ಪ್ರತಿವಾದಿ ತನ್ನ ಸ್ವಂತ ಗಳಿಕೆಯಿಂದ ಸಿ ಟಿ ಎಸ್ ನಂಬರ 5228/29 ನೇದ್ದರಲ್ಲಿ ಮನೆಯನ್ನು ಕಟ್ಟಿಸಿರುತ್ತಾರೆ ಎಂದರೆ ಸಾಕ್ಷಿ ಹಿರಿಯರು ಕಟ್ಟಿಸಿರುತ್ತಾರೆ ಎಂದು ನುಡಿಯುತ್ತಾರೆ . ತದನಂತರ 7 ನೇ ಪ್ರತಿವಾದಿ ಹೆಸರಿನಲ್ಲಿ ನೀರಿನ ಬಿಲ್ಲು ಮತ್ತು ಹೆಸ್ಕಾಂ ಬಿಲ್ಲು ಪುರಸಭೆಯ ತೆರಿಗೆಯನ್ನು ಕಟ್ಟುತ್ತಾ ಬಂದಿರುತ್ತಾನೆ ಎಂದರೆ ಸರಿಯಲ್ಲ . ಈಗ ಸದರಿ ಮನೆಯಲ್ಲಿ ರವಿ ಮತ್ತು ನಾಗವ್ವಾ ವಾಸ ಮಾಡುತ್ತಿದ್ದಾರೆ ಎಂದರೆ ಸಾಕ್ಷಿ 5 ನೇ ಪ್ರತಿವಾದಿ , 7 ನೇ ಪ್ರತಿವಾದಿ ವಾಸ ಮಾಡುತ್ತಾರೆ ಎಂದು ನುಡಿಯುತ್ತಾರೆ . ಸಾಕ್ಷಿ ಮುಂದುವರೆದು ನಾನು ಸದರಿ ಮನೆಯು ಸಹ ವಾಸ ಮಾಡುತ್ತೇನೆ ಎಂದು ನುಡಿಯುತ್ತಾರೆ .

ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ರೀತಿಯಲ್ಲಿ ಸದರಿ ಮನೆಯನ್ನು ಮಾರಾಟ ಮಾಡಿ ನನ್ನ ತಂದೆ ನನಗೆ ಮನೆ ಮಾಡಿಕೊಡುತ್ತೇನೆ ಎಂದು ಹೇಳಿದ ಬಗ್ಗೆ ತೋರಿಸಲು ನನ್ನ ಬಳಿ ಯಾವುದೇ ಕಾಗದ ಪತ್ರಗಳು ಇರುವದಿಲ್ಲ. ಅದೇ ರೀತಿ ನನ್ನ ಅಣ್ಣತಮ್ಮಂದಿರು ಒಪ್ಪಿಗೆ ಪತ್ರ ಮಾಡಿಕೊಟ್ಟಿರುತ್ತಾರೆ ಎಂದು ತೋರಿಸಲು ನನ್ನ ಬಳಿ ಯಾವುದೇ ಕಾಗದ ಪತ್ರಗಳು ಇರುವದಿಲ್ಲ . ನನ್ನ ಪರವಾಗಿ ನ್ಯಾಯಾಲಯದ ಮುಂದೆ ನನ್ನ ಸಹೋದರರ ಸಾಕ್ಷ್ಯವನ್ನು ಮಾಡಿಸಲು ಯಾವುದೇ ರೀತಿಯ ತೊಂದರೆ ಇರುವದಿಲ್ಲ . ಮನೆ ಮಾರಾಟ ಅದ ನಂತರ ನನ್ನ ತಂದೆ ಸುಮಾರು 13 ವರ್ಷಗಳು ಜೀವಂತ ಇದ್ದರು . ನನ್ನ ತಂದೆ ಜೀವಿತಾವದಿಯಲ್ಲಿ ಸದರಿ ಮನೆಯಲ್ಲಿ ನನಗೆ ಪಾಲು ಇದೆ ಎಂದು ನಾನು ಕೇಳುತ್ತಾ ಬಂದಿರುತ್ತೇನೆ ಅದರೆ ಕೊಟ್ಟಿರುವದಿಲ್ಲ ಎಂದು ನುಡಿಯುತ್ತಾರೆ . ನಾನು 05 ವರ್ಷಗಳ ಹಿಂದೆ ಪಂಚಾಯತಿ ಸೇರಿಸಿ 5 ಮತ್ತು 7 ನೇ ಪ್ರತಿವಾದಿಗೆ ಸದರಿ ಮನೆಯಲ್ಲಿ ಪಾಲು ಬೇಕು ಎಂದು ಕೇಳಿಕೊಂಡಿರುತ್ತೇನೆ . ಆ ಕಾಲಕ್ಕೆ ವಾಟ್ನಿ ಆಗಿರುತ್ತದೆ ಮತ್ತು ನಿನಗೆ ಪಾಲು ಬರುವದಿಲ್ಲ ಎಂದು ನನಗೆ 5 ಮತ್ತು 7 ನೇ ಪ್ರತಿವಾದಿಗಳು ಹೇಳಿರುತ್ತಾರೆ ಎಂದರೆ ಸರಿ . ಆ ಕಾಲಕ್ಕೆ ನಾನು ನ್ಯಾಯಾಲಯದ ಮುಂದೆ ಯಾವುದೇ ಕೇಸನ್ನು ಹುಡಿರುವದಿಲ್ಲ ಎಂದರೆ ಸರಿ .

ನಾನು ಈಗ ಸದರಿ ಮನೆಯಲ್ಲಿ ವಾಸ ಮಾಡುತ್ತಿದ್ದ ಬಗ್ಗೆ ತೋರಿಸಲು ಮತ್ತು ಮೂಲ ಸೌಕರ್ಯಗಳನ್ನು ಪಡೆದುಕೊಳ್ಳುತ್ತಿದ್ದ ಬಗ್ಗೆ ತೋರಿಸಲು ನನ್ನ ಬಳಿ ದಾಖಲಾತಿಗಳು ಇವೆ ಅವುಗಳನ್ನು ನ್ಯಾಯಾಲಯದ ಮುಂದೆ ಹಾಜರು ಪಡಿಸುತ್ತೇನೆ . ನಾನು ಖೊಟ್ಟಿಯಾಗಿ ಒಂದು ಶೆಡಿನ ಮುಂದೆ ನಿಂತು ನ್ಯಾಯಾಲಯದ ಮುಂದೆ ನಿಪಿ- 3 ಮತ್ತು 4 ರಂತೆ ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ . ಸದರಿ ಪೋಟೊಗಳಲ್ಲಿ ಕಾಣುತ್ತಿರುವ ಶೆಡ್ ದಲ್ಲಿ ಅಡುಗೆ ಮನೆ ಇತರೇ ಕೊಣೆಗಳು ಕಾಣುವದಿಲ್ಲ ಖೊಟ್ಟಿಯಾಗಿ ಸದರಿ ಪೋಟೋಗಳನ್ನು ಹಾಜರು

ಪಡಿಸಿರುತ್ತೇನೆ ಎಂದರೆ ಸರಿಯಲ್ಲ . ಈ ಹಿಂದೆ ಆದ ವಾಟ್ನಿಯಲ್ಲಿ ನನಗೆ ಮತ್ತು ನನ್ನ ಸಹೋದರರಿಗೆ ನಮ್ಮ ಪಾಲಿಗೆ ಬರುವಂತಹ ಆಸ್ತಿ ಮತ್ತು ಹಣ ಮುಟ್ಟಿದ್ದರು ಸಹ ಪ್ರತಿವಾದಿಗಳಿಗೆ ತೊಂದರೆ ಕೊಡಲು ಈ ಖೊಟ್ಟಿ ಕೇಸನ್ನು ನ್ಯಾಯಾಲಯದ ಮುಂದೆ ಹುಡಿರುತ್ತೇನೆ ಎಂದರೆ ಸರಿಯಲ್ಲ . ನಾನು ಉದ್ದೇಶಪೂರ್ವಕವಾಗಿ ಮುಂಬೈದಲ್ಲಿರುವ ಪ್ಲಾಟಗಳಲ್ಲಿ ವಾಟ್ನಿ ಯಾಗಿದ್ದರಿಂದ ಸದರಿ ಪ್ಲಾಟಗಳನ್ನು ಈ ಕೇಸಿನಲ್ಲಿ ಶಾಮಿಲು ಮಾಡಿರುವದಿಲ್ಲ ಎಂದರೆ ಸರಿಯಲ್ಲ . 5 ಮತ್ತು 7 ನೇ ಪ್ರತಿವಾದಿ ಸ್ವಂತ ಗಳಿಸಿದ ಆಸ್ತಿ ಆಗಿದ್ದರಿಂದ ನನಗೆ ಪಾಲು ಕೇಳಲು ಹಕ್ಕು ಇರುವದಿಲ್ಲ ಎಂದರೆ ಸರಿಯಲ್ಲ . ನನ್ನ ತಂದೆ ಜೀವಿತಾವದಿಯಲ್ಲಿ ಮನೆಯನ್ನು ಮಾರಾಟ ಮಾಡಿ ನನಗೆ ಬರುವಂತಾಹ ಪಾಲನ್ನು ನನಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ . ಅದ್ದರಿಂದ 5 ಮತ್ತು 7 ನೇ ಪ್ರತಿವಾದಿ ತೊಂದರೆ ಕೊಡಲು ಉದ್ದೇಶಪೂರ್ವಕವಾಗಿ ಖೋಟ್ಟಿ ಕೇಸನ್ನು ಹುಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ .

( 11 ನೇ ಪ್ರತಿವಾದಿ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು ನೀಡಲಾಯಿತು )

ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೆ.ಸರಿ ಇದೆ

sd/-

ಪ್ರಧಾನ ದಿವಾಣಿ ಮತ್ತು ಜೆ.ಎಂ.ಎಫ್.ಸಿ.

ನ್ಯಾಯಾಧೀಶರು ಜಮಖಂಡಿ